# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 01–09–2017

ಪ್ರಕಟಣ ಕೃಪೆಗಾಗಿ

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಕಾರ್ಯಕ್ರಮ**

**ಯುವಜನರಲ್ಲಿ ನೈತಿಕತೆ ಬೆಳೆಸಬೇಕಾಗಿದೆ – ಡಾ. ಸಿ ಜಿ ಉಷಾದೇವಿ**

ಕೊಳ್ಳೇಗಾಲ 01–09–2017 : ಇಂದಿನ ಯುವಕರೇ ಭವಿಷ್ಯದ ರಾಷ್ಟ್ರ ನಿರ್ಮಾತೃಗಳು, ಯುವಪೀಳಿಗೆ ಹಾಗೂ ನೈತಿಕ ಮೌಲ್ಯಗಳ ನಡುವೆ ಆಳವಾದ ಸಂಬಂಧವಿದೆ, ಆದರೆ ಇತ್ತೀಚಿನ ದಿನಗಳಲ್ಲಿ ಯುವಜನತೆಯಲ್ಲಿ ಮಾನವೀಯ ಹಾಗೂ ನೈತಿಕ ಮೌಲ್ಯಗಳು ಕಡಿಮೆಯಾಗುತ್ತಿವೆ ಎಂಬ ಮಾತಿದೆ. ಆದ್ದರಿಂದ ಯುವ ಜನರಲ್ಲಿ ನೈತಿಕತೆ ಬೆಳಸಬೇಕಾದ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದು ಡಾ. ಸಿ. ಜಿ ಉಷಾದೇವಿ, ನಿವೃತ್ತ ಸಹ ಪ್ರಾಧ್ಯಾಪಕರು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 2017–18ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು. ಮನುಷ್ಯನ ಬದುಕು ನಿರಂತರ ಹೋರಾಟ ನಾವು ಆತ್ಮವಿಶ್ವಾಸವನ್ನು ಕಳೆದುಕೊಳ್ಳದ ಹಾಗೆ ನಮ್ಮ ಬದುಕನ್ನು ಕಟ್ಟಬೇಕು. ಮುಂದಿನ ಬದುಕಿಗೆ ಕಾಲೇಜು ನಮ್ಮನ್ನು ತಯಾರಿ ಮಾಡುತ್ತದೆ. ದೇಹ ಕೊಟ್ಟಂತಹ ತಂದೆ ತಾಯಿ ಒಂದೆಡೆಯಾದರೆ ಬುದ್ದಿ ಕೊಟ್ಟಂತಹ ಗುರು ವೃಂದದವರನ್ನು ಗೌರವಿಸಬೇಕು. ಮೌನದ ನಡವಳಿಕೆಗಳಿಂದ ಎಚ್ಚೆತ್ತುಕೊಳ್ಳುವ ಪ್ರವೃತ್ತಿಯನ್ನು ಬೆಳಿಸಿಕೊಳ್ಳಬೇಕು. ಪುಸ್ತಕ ಪ್ರೀತಿ ನಮ್ಮ ಜೀವನಕ್ಕೆ ಶಕ್ತಿ ಕೊಡುತ್ತದೆ. ಓದದೆ ತರಗತಿಯೊಳಗಡೆ ಬರಬಾರದು ಹಾಗೂ ಓದದೆ ಮಲಗಬಾರದು. ನಿಜವಾದ ಜೊತೆಗಾರ ಪುಸ್ತಕವಾಗಿರಬೇಕು. ಸಂಗೀತ ಕೇಳಿದರೆ ತಲೆದೂಗುವ ವ್ಯಕ್ತಿಯಾರಿಲ್ಲ, ಸಂಗೀತ ಎನ್ನುವುದು ಎಲ್ಲರಿಗೂ ಸಂತೋಷವನ್ನುಂಟುಮಾಡುತ್ತದೆ. ಬಹಿರಂಗದಲ್ಲಿ ಬೆಳೆದರೆ ಸಾಲದು ಅಂತರಂಗದಲ್ಲೂ ನಾವು ಬೆಳೆಯಬೇಕು.

ಮೌಲ್ಯ ಶಿಕ್ಷಣವನ್ನು ಕಾಲೇಜು ಶಿಕ್ಷಣದಲ್ಲಿ ಒಂದು ಪ್ರತ್ಯೇಕ ವಿಷಯವಾಗಿ ಅಳವಡಿಸುವ ಅವಶ್ಯಕತೆಯಿದೆ. ಮೌಲ್ಯಗಳು ಅಧಃ ಪತನಕ್ಕೆ ಕುಸಿಯಲು ಮೌಲ್ಯ ಶಿಕ್ಷಣ ಕಲಿಯದಿರುವುದೇ ಪ್ರಮುಖ ಕಾರಣವಾಗಿದೆ. ನೈತಿಕ ಮೌಲ್ಯಗಳನ್ನು ಹಳವಡಿಸಿಕೊಳ್ಳದ ಹೊರತು ವ್ಯಕ್ತಿಯ ವೈಕ್ತಿತ್ವ ಪರಿಪೂರ್ಣವಾಗದು ಪಠ್ಯಕ್ಕೆ ಕೊಡುವಷ್ಟೇ ಮಹತ್ವವನ್ನು ಮೌಲ್ಯಗಳನ್ನು ಕಲಿಯುವುದಕ್ಕೂ ನೀಡಿ ಈ ದೇಶದ ಉತ್ತಮ ಪ್ರಜೆಗಳಾಗಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ವೆಂಕಟೇಶ ಸಹ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರುರವರು ವಿದ್ಯಾರ್ಥಿಗಳ ಪದವಿ ಪಡೆಯುವುದರ ಜೊತೆಗೆ ದೈಹಿಕ ಶಿಕ್ಷಣ ಹಾಗೂ ಸಾಂಸ್ಕೃತಿಕವಾಗಿ ಮಾನಸಿಕ ಸಧೃಡತೆ ಹೊಂದಬೇಕಾಗಿದೆ. ಕ್ರೀಡೆಯಿಂದ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯ ಪಡೆಯಬಹುದಾಗಿದೆ. ಜಡತ್ವ ತೊರೆದು ಕ್ರಿಯಾಶೀಲರಾಗ ಬಹುದಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಮಾಧ್ವ ನಾಯಕ್, ಆರಕ್ಷಕ ಉಪನಿರೀಕ್ಷಕರು, ನಗರ ಪೋಲೀಸ್ ಠಾಣೆ, ಕೊಳ್ಳೇಗಾಲ ರವರು ಮಾತನಾಡಿ ವಿದ್ಯಾರ್ಥಿಗಳ ಗುರಿ ದೊಡ್ಡದಿರಬೇಕು. ಆಸಕ್ತಿ ಹಾಗೂ ಪರಿಶ್ರಮವಿದ್ದರೆ ಅದೇ ತಮ್ಮನ್ನು ಗುರಿಯಡೆಗೆ ಕರೆದೊಯ್ಯುತ್ತದೆ. ಪತ್ರಿಕೆಗಳಲ್ಲಿ ಬರುವ ಸಂಪಾದಕೀಯ ಹಾಗೂ ಲೇಖನ ಭಾಗಗಳನ್ನು ಮತ್ತು ಮಹಾಪುರುಷರ ಜೀವನ ಚರಿತ್ರೆಗಳನ್ನು ಓದುವುದರಿಂದ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬಹುದಾಗಿದೆ. ಕ್ರೀಡೆ ಎಂಬುದು ಒಂದು ಉತ್ತಮ ವೃತ್ತಿ. ಅದು ಜೀವನ ಕೌಶಲ್ಯಗಳನ್ನು ತಿಳಿಸಿಕೊಡುತ್ತಿದೆ. ಇಂಥ ವೇದಿಕೆಗಳು ವಿದ್ಯಾರ್ಥಿಗಳನ್ನು ಸುಸಂಸ್ಕೃತರು, ವಿವೇಕ ಸಂಪನ್ನರು ಹಾಗೂ ಉತ್ತಮ ಪ್ರಜೆಗಳನ್ನಾಗಿ ಮಾಡುವುದರಲ್ಲಿ ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಪ್ರೊ. ಉಮೇಶ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ. ಎಂ ಪ್ರಭು, ಕ್ರೀಡಾ ವೇದಿಕೆ ಸಂಚಾಲಕ ಶ್ರೀಮತಿ ಕೆ ಆರ್ ಉಮಾದೇವಿ, ಸಾಂಸ್ಕೃತಕ ವೇದಿಕೆ ಸಂಚಾಲಕಿ ಕು. ಆರ್ ಪಿ ಸೌಮ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಜೆ ಎಸ್ ಎಸ್ ಮಹಿಳಾ ಕಾಲೇಜು
ಕೊಳ್ಳೇಗಾಲ
ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ
ಉದ್ಘಾಟನಾ ಸಮಾರಂಭ




ಜೆ ಎಸ್ ಎಸ್ ಮಹಿಳಾ ಕಾಲೇಜು
ಕೊಳ್ಳೇಗಾಲ
ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ
ಉದ್ಘಾಟನಾ ಸಮಾರಂಭ
ಕೊಳ್ಳೇಗಾಲ.

